ಹಾನಿಯಾಗಿರುತ್ತದೆ. ಆದರಲ್ಲಿ ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 27,015 ಹೆಕ್ಟೇರ್ ಮುಂಗಾರಿ ಬೆಳೆಗಳು ಹಾಗೂ 14,906 ಹೆಕ್ಟೇರ್ ಹಿಂಗಾರಿ ಬೆಳೆಗಳು ಹಾನಿಯಾಗಿರುವುದು ವರದಿಯಾಗಿರುತ್ತದೆ. ಒಟ್ಟು 41,921 ಹೆಕ್ಟೇರ್ ಕೃಷಿ ಬೆಳೆಗಳು ಹಾನಿಗೊಳಗಾಗಿದ್ದು ಕೃಷಿ ಇಲಾಖಾವತಿಯಿಂದ ಇದನ್ನು ಅಂದಾಜು ಮಾಡಿಸಿ ಬೆಳೆಹಾನಿಗೊಳಗಾದ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.500–00 ರಂತೆ ಮುಂದಿನ ಬೆಳೆಯನ್ನು ಬೆಳೆಯಲು ಅಗತ್ಯ ಕೃಷಿ ಸಾಮಗ್ರಿಗಳ ಕಿರುಚೀಲಗಳನ್ನು ಕೊಡಲು ಸೂಕ್ತ ಪ್ರಸ್ತಾವನೆಯನ್ನು ತಯಾರಿಸಲಾಗಿದೆ.

ಆ) ಕಿರು ಚೀಲಗಳನ್ನು ನೀಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಬೆಳೆಗಳ ಹಾನಿ

203 (135q) ಶ್ರೀ ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಎಷ್ಟು ಎಕರೆ ಬೆಳೆ ನಾಶವಾಗಿದೆ ಹಾಗೂ ಹಾಳಾದ ಪಂಪು ಸೆಟ್ಟುಗಳೆಷ್ಟು ?

ಆ) ಸದರಿ ಹಾಳಾದ ಪಂಪು ಸೆಟ್ಟುಗಳಿಗೆ ಸರ್ಕಾರವು ಎಷ್ಟು ಪರಿಹಾರ ನೀಡಿದೆ ?

ಇ) ಆ ನೆರೆ ಹಾವಳಿಯಿಂದ ಎಷ್ಟು ಎಕರೆ ಭೂಮಿ ನಾಶವಾಗಿದೆ ?

ಈ) ನೆರೆ ಹಾವಳಿಯಿಂದ ಬೆಳೆ ನಾಶವಾದ ರೈತರಿಗೆ ಎಕರೆಗೆ ಎಷ್ಟು ಪರಿಹಾರ ಧನವನ್ನು ಸರ್ಕಾರವು ನೀಡಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)-

ಅ) ಸಿಂಧನೂರು ತಾಲ್ಲೂಕಿನಲ್ಲಿ 1,02,587.7100 ಎಕರೆ ಬೆಳೆ ನಾಶವಾಗಿದೆ ಹಾಗೂ 1,059 ಪಂಪು ಸೆಟ್ಟುಗಳು ಹಾಳಾಗಿರುತ್ತವೆ.

ಆ) ಹಾಳಾದ ಬಾವಿ:ಪಂಪು ಸೆಟ್ಟುಗಳಿಗೆ ರೂ.3,000–00 ನಂತೆ ಪರಿಹಾರವನ್ನು ನೀಡಲಾಗುವುದು.

ಇ) 1015 ಎಕರೆಯಷ್ಟು ವ್ಯವಸಾಯದ ಭೂಮಿ ನಾಶವಾಗಿರುತ್ತದೆ.

ಈ) ಬೆಳೆ ನಾಶವಾದ ರೈತರಿಗೆ ಪ್ರತಿ ಎಕರೆಗೆ 200–00 ರೂ.ನಂತೆ ಪರಿಹಾರವನ್ನು ವ್ಯವಸಾಯ ಸಾಮಗ್ರಿಗಳ ರೂಪದಲ್ಲಿ ನೀಡಲಾಗುವುದು.

ರಾಯಚೂರು ಜಿಲ್ಲೆಯಲ್ಲಿ ನೆರೆ ಹಾವಳಿ

204 (136) ಶ್ರೀ. ಬಿ. ಹಂಪನ ಗೌಡ (ಸಿಂಧನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನವೆಂಬರ್ 16 ರಿಂದ 20 ರವರೆಗೆ ರಾಯಚೂರು ಜಿಲ್ಲೆಯಲ್ಲಿ ಎಷ್ಟು ಪ್ರಮಾಣದಲ್ಲಿ ಮಳೆಯಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ನೆರೆ ಹಾವಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಪ್ರಾಣ ಹಾನಿಯಾದ ಸಂಖ್ಯೆ ಎಷ್ಟು ಮತ್ತು ಸರ್ಕಾರದಿಂದ ಅವರಿಗೆ ಎಷ್ಟು ಪರಿಹಾರ ಕೊಡಲಾಗಿದೆ ? (ತಾಲ್ಲೂಕುವಾರು ಮಾಹಿತಿ ನೀಡುವುದು)